ಎಂಬುದಾಗಿ ಚೆನ್ನಬಸವಣ್ಣ ಮುಕ್ತವಾಗಿ ಹೊಗಳುತ್ತಾನೆ. ಮೇರು ಜ್ಞಾನಿ ಅಕ್ಕ ಎಂಬುದನ್ನು ಶರಣರು ಒಪ್ಪಿಕೊಳ್ಳುತ್ತಾರೆ.

## ಪಾತಿವ್ರತ್ಯ, ಏಕದೈವನಿಷ್ಠೆ, ವಚನಗಳಲ್ಲಿ ಹೆಣ್ಣು

ಇತಿಹಾಸದಲ್ಲಿ ಹೆಂಗಸರನ್ನೂ ಜೊತೆಗೂಡಿಸಿಕೊಂಡು ಚಳವಳಿ ಕಟ್ಟಿದವರೆಡೆಗೆ ಬಹುದೊಡ್ಡ ನಿರೀಕ್ಷೆಯೊಂದು ನಮ್ಮಲ್ಲಿ ಹುಟ್ಟಿಕೊಂಡರೆ ಅದು ಬಹು ಸಹಜ ಕೂಡ. ಬುದ್ಧ ಅಳೆದೂ ಸುರಿದೂ ಹಲವು ಷರತ್ತುಗಳೊಂದಿಗೆ ಹೆಂಗಸರನ್ನು ಸಂಘಕ್ಕೆ ಸೇರಿಸಿಕೊಂಡ. ಶರಣರಲ್ಲಿ ಈ ಕುರಿತು ಯಾವ ಗೊಂದಲಗಳೂ ಇದ್ದಿರಲಿಲ್ಲ. ಹಾಗಂತ ಅವರಿಗೆ ಅನುಮಾನಗಳೇ ಇರಲಿಲ್ಲ ಅಂತಲ್ಲ. ಹಾಗೆ ಜೊತೆ ಸೇರಿ ಚಳವಳಿ ಕಟ್ಟಿದ ಮೇಲೆ ಹೆಣ್ಣಿನ 'ಪಾತ್ರ' ಬದಲಾಯಿತೇ? ಬದಲಾಯಿಸಬೇಕು ಅಂತ ಶರಣರಿಗೆ ಅನ್ನಿಸಿತೇ? ಶಿವನೆಂಬ ಪುರುಷನಿಗೆ ಸತಿಯೆಂಬ ಹೆಣ್ಣಾದ ಶರಣರ ಮನಸ್ಸು ಹೆಣ್ಣಾಯಿತೇ? ಇದನ್ನೆಲ್ಲಾ ಅರಿಯುವುದಕ್ಕೆ ಶರಣರ ವಚನವಲ್ಲದೆ ಬೇರೆ ದಾರಿಯಿಲ್ಲ. ವಚನಗಳ ಮರು ಓದು ನಮ್ಮನ್ನು ಇನ್ನಷ್ಟು ಆಳವಾಗಿ ಯೋಚಿಸುವುದಕ್ಕೆ ಅನುವು ಮಾಡಿಕೊಡುತ್ತದೆ.

ಆಧುನಿಕ ಕಾಲದ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ನಮ್ಮನ್ನಾಳಲು ಸಂವಿಧಾನದ ನಿಯಮಗಳಿವೆ. ಇಲ್ಲಿ ಹೆಣ್ಣನ್ನೂ ಸೇರಿಸಿಕೊಂಡು ಹಲವರಿಗೆ ಹಲವು ಅವಕಾಶಗಳನ್ನು ನೀಡಲಾಗಿದೆ. ಕಾನೂನು ಬದ್ಧವಾಗಿ ಮಾತನಾಡುವಾಗ, ಹಾಳೆಯ ಮೇಲೆ ಇವೆಲ್ಲವೂ ನಿಜ. ಆದರೆ, ಪ್ರತ್ಯಕ್ಷವಾಗಿ ನೋಡುವಾಗ ಇವುಗಳನ್ನು ಬದಿಗೆ ಸರಿಸಿ ಕಾರ್ಯರೂಪದಲ್ಲಿರುವ ಸಂವಿಧಾನ ವಿರುದ್ಧವಾದ ನಿಯಮಗಳೆಷ್ಟೋ ನಮ್ಮನ್ನು ಆಳುತ್ತಿರುತ್ತವೆ. ಹೆಣ್ಣಿನ ಮಟ್ಟಿಗಂತೂ ಇದು ಅಕ್ಷರಶಃ ಸತ್ಯ. ಹೆಣ್ಣನ್ನು ಲಿಖಿತ ಸಂವಿಧಾನಕ್ಕಿಂತಲೂ ಅಲಿಖಿತ ಸಂವಿಧಾನವೇ ಹೆಚ್ಚು ಆಳುತ್ತಿದೆ ಹಾಗೂ ಹೆಣ್ಣಿನ ನಿಯಂತ್ರಣ-ವ್ಯಾಖ್ಯಾನವನ್ನು ಸಂಪ್ರದಾಯ, ಆಚರಣೆ, ಪರಂಪರೆಯ ಹೆಸರಿನಲ್ಲಿ ಮಾಡುತ್ತಿರುತ್ತದೆ. ಕೆಲವೊಮ್ಮೆ ಇದನ್ನು ಪೂರ್ವಾನುಭವದ ಹೆಸರಿನಲ್ಲೂ ಮಾಡಲಾಗುತ್ತದೆ. ಯಾರದೋ ಅನುಭವವು 'ಎಲ್ಲರ ಅನುಭವ' ಎಂದು ಬಿಂಬಿಸಲಾಗುತ್ತದೆ. ಹೆಣ್ಣು ಮೋಸಗಾತಿ ಎಂದು ಹೇಳುವುದು ಇಂತಹ ಒಂದು ರೀತಿ. ಇನ್ನು ಹೆಣ್ಣಿನ ರಕ್ಷಣೆಯ ಹೆಸರಿನಲ್ಲಿ ಅವಳನ್ನು ಆಳಲಾಗುತ್ತದೆ. ಆದ್ದರಿಂದ ಅವಳು ಸದಾ ಒಬ್ಬನ ಅಂಕಿತದಲ್ಲಿ ಇರುವುದೇ ಹೆಚ್ಚು ಕ್ಷೇಮ ಎಂದು ಹೇಳಲಾಗುತ್ತದೆ. ಹೆಣ್ಣು ಈ ಅಂಕೆ ಮೀರಿದಾಗ ಅವಳನ್ನು ಹಾದರಗಿತ್ತಿ, ನಂಬಿಕೆ ದ್ರೋಹಿ, ಮಾನಿಸಗಳ್ಳಿ ಎಂದೆಲ್ಲಾ ದೂಷಿಸಲಾಗುತ್ತದೆ. ಬಸವಣ್ಣನವರ ವಚನಗಳಲ್ಲೂ ಇಂತಹ ಪದಗಳು ದಂಡಿಯಾಗಿ ಬಳಕೆಯಾಗಿವೆ. ಇದು ಯಾಕೆ ಹೀಗಾಯ್ತು? ಸುಧಾರಕ ಬಸವಣ್ಣನವರಿಗೆ ಹೆಣ್ಣನ್ನು ಬೇರೆ ರೀತಿಯಲ್ಲಿ ಗ್ರಹಿಸಲು ಸಾಧ್ಯವಾಗುತ್ತಿರಲಿಲ್ಲವೇ? ಸಮಾಜದಲ್ಲಿ ಉಳಿದವರು ಹೇಗೆ ಹೆಣ್ಣನ್ನು ದೂಷಿಸುತ್ತಿದ್ದರೋ ಇವರೂ ಹಾಗೆಯೇ ದೂಷಿಸುವುದು ನಮ್ಮ ನಿರೀಕ್ಷೆಯನ್ನು ತಲೆಕೆಳಗಾಗಿಸುತ್ತದಲ್ಲವೇ?

ಜಾತಿ ತಾರತಮ್ಯದ ಬಗೆಗೆ, ವರ್ಗ ತಾರತಮ್ಯದ ಬಗೆಗೆ ಕೂಡಾ ಬಸವಣ್ಣನವರದು ಸಮಾಜದ ಇತರರಿಗಿಂತ ಭಿನ್ನವಾದ ನಿಲುವು. ಅನುಭವ ಮಂಟಪದಲ್ಲಿ ಹೆಣ್ಣುಮಕ್ಕಳ ಭಾಗವಹಿಸುವಿಕೆಯ ಬಗೆಗೂ ಸಮಾಜದ ಇತರರಿಗಿಂತ ಭಿನ್ನ ನಿಲುವು. ಶರಣರು ಕಟ್ಟಬಯಸಿದ ಸಮ ಸಮಾಜದಲ್ಲಿ ಸಮಾಜದ ಸಾಂಪ್ರದಾಯಿಕ ನಡೆಯಲ್ಲಿರುವ ಕೊರತೆಗಳನ್ನು ಖಚಿತವಾಗಿ ಗ್ರಹಿಸಿದ ಕಣ್ನೋಟ ಇವರದಾಗಿತ್ತು. ಈ ಕಾರಣದಿಂದ ಬಸವಣ್ಣನು ಸ್ತ್ರೀಯರ ಬಗೆಗೆ ತಳೆದ ಧೋರಣೆಗಳೇನು ಎಂಬುದನ್ನು ವಾದಿಸದೆ, ಸಂವಾದಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಪ್ರಭುತ್ವದಿಂದ ಹಿಡಿದು, ಸಂಸಾರದ ತನಕ ಎಲ್ಲವನ್ನೂ ನಿರಾಕರಿಸಿ ಮುನ್ನಡೆಯುವ ಸ್ವಾತಂತ್ರ್ಯ ಮತ್ತು ಸಾಧ್ಯತೆಯನ್ನು ಭಕ್ತಿ ನೀಡುತ್ತದೆ. ಪ್ರಭುತ್ವದ ಜೊತೆ ನೇರ ಸಂಪರ್ಕ ಪಡೆದವರು ಅಕ್ಕ ಮತ್ತು ಬಸವಣ್ಣ ಮಾತ್ರ. ಅಕ್ಕ ವ್ಯಕ್ತಿನೆಲೆಯಲ್ಲಿ ಅದನ್ನು ಧಿಕ್ಕರಿಸಿ ನಡೆದಳು. ಬಸವಣ್ಣ ಸಂಘಟಕನಾಗಿ ಆ ಅಧಿಕಾರದ ವ್ಯಾಪ್ತಿಯಲ್ಲಿ ತಾನು ಏನೇನು ಮಾಡಬಹುದೋ ಅದನ್ನು ಮಾಡುವುದಕ್ಕಾಗಿ ಅದರ ಜೊತೆಗೇ ಏಗಿದ. ಹೀಗೆ ಮಾಡುವುದರ ಮೂಲಕ ಹೆಚ್ಚು ಜನರನ್ನು ತಲುಪುವುದು, ಅದರಲ್ಲೂ ಸಾಮಾನ್ಯ ಕಾಯಕ ಜೀವಿಗಳನ್ನು ಪ್ರಭಾವಿಸುವುದು, ಸೆಳೆಯುವುದು ಅವನ ಆದ್ಯತೆಯಾಗಿತ್ತು. ಈ ಹಂತದಲ್ಲಿ ಅವನು ನಿರ್ದೇಶಿಸಿದ್ದು - ನಾವು ಬದುಕುತ್ತಿರುವ ವ್ಯವಸ್ಥೆಗಳ ಸಂದಿಗ್ಧತೆ,